said that about 40 percent of water is being supplied to the Alluminium Factory. When there is scarcity of water for the people. There was no need to supply water to the factory, The Industrial Estate has no water supply for the last ten years.

Sri Krishnan said a little while ago that Sri Basavalingappa has done justice to the scavangers by stopping the carrying of night soil on the heads. Though orders have been passed long ago prohibiting the carrying of night soil on heads, yet the practice has not been discontinued. The underground Drainage scheme is not yet completed. The Government has not acquired about 35 acres of land meant for the sewage water.

There is another thing. There is that Town Planning Authority working for more than ten years, but what is the use of the Town Planning Authority ? The rich people are constructing houses on the roads. They are not taking cognizane of it also. I request the Government to please abolish this Town Planning Authority from Belgaum. Not only in Belgaum but everywhere, this Town Planning Authority should be abolished immediately.

With these words, I thank the Chair for giving me an opportunity to speak a few words and conclude my speech.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ). – ನಾನು ಭಾಷಣ ಮಾಡುವುದಿಲ್ಲ. ಮಂತ್ರಿಗಳು ಸೋಮವಾರ ಉತ್ತರ ಕೊಡುವಾಗ ಮುನಿಸಿಪಾಲಿಟಿಗಳಲ್ಲಿ ಆರಿಯರ್ಸ್ ಬಹಳ ಇದೆ, ಖಾಸಗಿ ಸದಸ್ಯರುಳ್ಳಂಥ ಪುರಸಭೆಗಳಲ್ಲಿ ಆರಿಯರ್ಸ್ ವಸೂಲುಮಾಡುವುದಕ್ಕೆ ಕ್ರಮ ತೆಗೆದು ಕೊಳ್ಳುವುದಕ್ಕೆ ಆಗಿಲ್ಲ, ಆಡ್ಮಿನಿಸ್ಟ್ರೇಟರ್ ಹಾಕುವ ಮುಖೇನ ಅವರು ಚುರುಕಾದ ಕಾರ್ಯಕ್ರಮ ತೆಗೆದುಕೊಂಡು ಆರಿಯರ್ಸ್ ವಸೂಲು ಮಾಡುತ್ತಾರೆ ಎಂದು ತಮ್ಮ ಪ್ರಿಡಿಸಿಸರ್ ಹೇಳಿದ್ದಾರೆ. ಆಡ್ಮಿನಿಸ್ಟ್ರೇಟರ್ ನೇಮಕ ಮಾಡಿದ ಮೇಲೆ ಯಾವ ಯಾವ ಮುನಿಸಿಪಾಲಿಟಿಯಲ್ಲಿ ಎಷ್ಟೆಷ್ಟು ಆರಿಯರ್ಸ್ ವಸೂಲಾಗಿದೆ ಎನ್ನುವುದನ್ನು ತಿಳಿಸಬೇಕು. ಮತ್ತೊಂದು ವಿಷಯ, ಆಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ ಮೇಲೆ ಆಕ್ಯ್ಯುಯ್ ಏನಾಗಿದೆ ಎಂದು ಹೇಳಬೇಕು. ನನಗೆ ಗೊತ್ತಿರುವ ರೀತಿ, ಆಕ್ಯ್ಯುಯ್ ಕಲೆಕ್ಷನ್ ವಿವಿಧ ಹಂತಗಳಲ್ಲಿ ವಿನಿಯೋಗವಾಗುತ್ತಾ ಇದೆ ಎಂದು ಕೇಳಿದ್ದೇನೆ. ವಿನಿಯೋಗ ಹೇಗೆ ಎಂದರೆ, ಆಕ್ಯ್ಯುಯ್ ಕಲೆಕ್ಟ್ ಮಾಡುವ ಜಾಗದಿಂದ ಹಿಡಿದು ವಿಧಾನಸೌಧದ ಬುಡದವರೆಗೆ ವಿವಿಧ ಹಂತಗಳಲ್ಲಿ ವಿನಿಯೋಗವಾಗುತ್ತಿದೆ ಎಂದು ಕೇಳಿದ್ದೇನೆ. ಆಡ್ಮಿನಿಸ್ಟ್ರೇಟರ್‌ನು ನೇಮಕ ಮಾಡಿದ ಮೇಲೆ ಎಷ್ಟರಮಟ್ಟಿಗೆ ಆಕ್ಯ್ಯುಯ್ ಕಲೆಕ್ಷನ್ ಹೆಚ್ಚಿದೆಯೇ ಅಥವಾ ಇಳಿದಿದೆಯೇ ಎನ್ನುವ ಬಗ್ಗೆ ವಿವರಣೆ ಕೊಡಿ. ಇನ್ನೊಂದು ವಿಷಯ, ಎಲ್ಲಾ ಪುರಸಭೆಗಳಿಗೆ ಯಾವಾಗ ಚುನಾವಣೆ ಮಾಡುತ್ತೀರಿ ? ಮಾಡದೇ ಇರತಕ್ಕ ಪುರಸಭೆಗಳಿಗೆ ಯಾವಾಗ ಚುನಾವಣೆಮಾಡಿ ಮುಗಿಸುತ್ತೀರಿ ? ಈ ಮೂರು ಐಟಂಗಳಿಗೆ ಸೋಮವಾರ ವಿವರಣೆ ಕೊಡಿ.

Half an Hour Discussion Arising out of replies to Starred Question No. 249 (On 12-3-1974)

re : **mal-practice by licensed rice dealers in S. K. District**

MR. DEPUTY SPEAKER.—We shall take up the next item. Half an hour discussion on matters arising out of answers given to starred question on 12-3-1974 regarding malpractice by licensed rice dealers in South Kanara District.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಉಪಾಧ್ಯಕ್ಷರೇ, ಈ ಅರ್ಧ ಗಂಟೆ ಚರ್ಚೆಗೆ ಬಂದಿರುವ ವಿಷಯ ನಮ್ಮ ಪ್ರಶ್ನೆಯ ಆಧಾರದ ಮೇಲೆ. ಗೆಳೆಯ ಮಾನ್ಯ ಸದಸ್ಯರಾದಂಥ ಶ್ರೀ ಬಿ. ವಿ. ಕಕ್ಕಿಲಾಯರವರು ಕೇಳಿದಂಥ ಪ್ರಶ್ನೆಗಳಿಗೆ ಸರಿಯಾದಂಥ ಉತ್ತರ ಮಾನ್ಯ ಆಹಾರ ಸಚಿವರಿಂದ ಸಿಕ್ಕಿಲಿಲ್ಲ ಎಂದು ಹೇಳಿ, ಈ ಅರ್ಧ ಗಂಟೆ ಚರ್ಚೆಗೆ ಅವಧಿಯನ್ನು ಕೇಳಿದೆವು. ಅದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಪ್ರಶ್ನೆ ಯಾದರೂ ಮುಖ್ಯವಾಗಿ, ಅವರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರಧಾನ್ಯಗಳ ವಿತರಣೆಯಲ್ಲಿ ಅದರಲ್ಲೂ ಅಲ್ಲಿರುವಂಥ ವ್ಯಾಪಾರಸ್ಥರು ನಡೆಸುವಂಥ ವ್ಯವಹಾರಗಳು ಸರಿಯಿಲ್ಲ. ಅಲ್ಲಿರುವ ವ್ಯಾಪಾರಸ್ಥರು ಅನೀತಿಯತೆ, ಅಕ್ರಮ ವ್ಯವಹಾರ ಮತ್ತು ಕಳ್ಳವ್ಯಾಪಾರ ಮಾಡುತ್ತಿದ್ದಾರೆಂದೂ, ಸರ್ಕಾರಕ್ಕೆ ಕೊಡಬೇಕಾದ ಹಣ ಕೊಡದೇ ಇರುವ ಅನೇಕ ದೂರುಗಳನ್ನು ಅಲ್ಲಿನ ಜನ ಮತ್ತು ಜನತಾ ಪ್ರತಿನಿಧಿಗಳು ಅಲ್ಲಿರುವ ಡೆಪ್ಯುಟಿ ಕಮಿಷನರಿಗೂ, ಸರ್ಕಾರಕ್ಕೂ ಆಗಿಂದಾಗ್ಗೆ ಕೊಟ್ಟರೂ ಸಹ ಯಾವರೀತಿಯಾದ ಪರಿಣಾಮಕಾರಿಯಾದ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎನ್ನುವ ದೂರು ಇದೆ. ಇಷ್ಟು ಮಾತ್ರವಲ್ಲ, ಅತಿಮುಖ್ಯವಾದ ಕೆಲವು ವ್ಯಾಪಾರಿಗಳು ಅಂದರೆ ಆಹಾರಧಾನ್ಯ ವಿತರಣೆ ಮಾಡುವವರ, ಹಂಚುವವರ, ಮಾರಾಟ ಮಾಡುವ 5 ಜನ ವ್ಯಾಪಾರಿಗಳ ಮೇಲೆ ಕ್ರಮ ತೆಗೆದುಕೊಂಡು ಲೈಸನ್ಸ್ ಕ್ಯಾನ್ಸರ್ ಮಾಡಬೇಕು ಎಂದು ಫುಡ್ ಇನ್‌ಸ್ಪೆಕ್ಟರ್ ರಿಪೋರ್ಟ್ ಕಳಿಸಿದ ಮೇಲೆ ಡೆಪ್ಯುಟಿ ಕಮಿಷನರು ಲೈಸನ್ಸ್ ಕ್ಯಾನ್ಸರ್ ಮಾಡಿದ್ದಾರೆ. ಮಾಡಿದ ಮೇಲೆ ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಅದಕ್ಕೆ ತಡೆ ಹಾಕಿದ್ದಾರೆ. ಆ 5 ಜನರು ಯಾರು ? ಯಾವ ಆಧಾರದ ಮೇಲೆ ಲೈಸನ್ಸ್ ಕ್ಯಾನ್ಸರ್ ಮಾಡಿದರು ? ಲೈಸನ್ಸ್ ಕ್ಯಾನ್ಸರ್ ಮಾಡುವುದಕ್ಕೆ ಕಾರಣವೇನು ಎಂದು ಕೇಳಿದ್ದಕ್ಕೆ ಬಂದಂಥ ಉತ್ತರ, ಅಲ್ಲಿರುವಂಥ ಫುಡ್ ಇನ್‌ಸ್ಪೆಕ್ಟರ್ ಒಂದು ವರದಿಯನ್ನು ಕಳಿಸಿದ್ದಾರೆ, ಆ ವರದಿ ಆಧಾರದ ಮೇಲೆ ಫುಡ್ ಕಮಿಷನರ್ ಕ್ರಮ ತೆಗೆದುಕೊಂಡರು ಎಂದು. ಆ ವರದಿ ಏನಿದೆ ಎಂದು ನನಗೆ ಗೊತ್ತಿಲ್ಲ. ವರದಿ ಸರಿಯಾಗಿದ್ದು ಕ್ಯಾನ್ಸಲ್ ಆಗಿದ್ದರೆ ಒಪ್ಪಿಕೊಳ್ಳುತ್ತೇನೆ. ವರದಿ ಸರಿಯಿಲ್ಲದೇ ಹೋದರೆ ಬೇಕು ಎಂದು ಹಿಡ್ದು ಇಟ್ಟುಕೊಂಡು ಆಗದೇ ಇರುವವರು ರಾಜಕೀಯ ದೃಷ್ಟಿಯಿಂದ ಅಂಥವರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಅದು ತಪ್ಪು. ಆದುದರಿಂದ ನಾವು ಕೇಳಿದ್ದು, ಇವತ್ತಿನದಿವಸ ಯಾತಕ್ಕೋಸ್ಕರ ಕಾರ್ಯಕ್ರಮ ತೆಗೆದುಕೊಂಡಿರಿ ಎಂದು. ಫುಡ್ ಇನ್‌ಸ್ಪೆಕ್ಟರ್ ವರದಿ ಏನು ಎಂದು ಕೇಳಿದ್ದಕ್ಕೆ ವಾಚ್ಯ ಸಚಿವರು ಉತ್ತರ ಕೊಟ್ಟಿದ್ದು, ಫುಡ್ ಇನ್‌ಸ್ಪೆಕ್ಟರ್ ವರದಿ ಸೀಕ್ರೆಟ್ ಡಾಕ್ಯುಮೆಂಟ್ ಎನ್ನುವ ರೀತಿಯಲ್ಲಿ ಮಾತನಾಡಿದರು. ಕಾನ್‌ಫಿಡೆನ್‌ಷಿಯಲ್ ಡಾಕ್ಯುಮೆಂಟ್ ಎನ್ನುವ ರೀತಿಯಲ್ಲಿ ಮಾತನಾಡಿದರು. ನನಗೆ ತಿಳಿದಮಟ್ಟಿಗೆ ಸರ್ಕಾರದ ಕೆಳಗಿನ ಅಧಿಕಾರಿ ಡೆಪ್ಯುಟಿ ಕಮಿಷನರ್ ಕಳಿಸಿದಂಥ ವರದಿ, ತನಿಖೆಮಾಡಿದಂಥ ವರದಿ ಹೇಗೆ ಆಗುತ್ತದೆ ? ಯಾವರೀತಿ ಈ ಮನೆಯಲ್ಲಿ ಮುಚ್ಚಿಡುವುದಕ್ಕೆ ಆಗುತ್ತದೋ ಗೊತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ, ನನಗೆ ತಿಳಿದಮಟ್ಟಿಗೆ, ಆರೀತಿ ವರದಿಗಳನ್ನು ಮುಚ್ಚುವುದಕ್ಕೆ ಹಕ್ಕಿಲ್ಲ. ಅದನ್ನು ನನಗೆ ಸ್ಪಷ್ಟವಾಗಿ ತಿಳಿಸಬೇಕಾಗಿತ್ತು. ಹೇಳುವುದಕ್ಕೆ ತಯಾರು ಇಲ್ಲದೇ ಇರುವುದರಿಂದ, ಇವತ್ತು ನಮಯ ಬಂದಿದೆ, ಬೇಕು ಎಂದು ಕೆಲವರನ್ನು ಷೆರ್ಪ್ ಮಾಡುವುದಕ್ಕೆ ಪ್ರಯತ್ನ ಪಡುತ್ತೀರಿ. ಕೆಲವರು ಮಾಡಿಲ್ಲ. ಕೆಲವರು ಆರೋಪಿಗಳು ಇದ್ದರೂ ಸಹ ಅದನ್ನು ಮುಚ್ಚುವುದಕ್ಕೆ ಹಲವಾರು ಕಾರಣಗಳಿಂದ ರಾಜಕೀಯ ಉದ್ದೇಶ ಇದ್ದರೂ ಇರಬಹುದು ನಮಗೆ ಗೊತ್ತಿಲ್ಲ, ಆರೀತಿ ಆಗಿದೆ ಎನ್ನುವ ಸಂಶಯಕ್ಕೆ ಎಡೆ ಮಾಡಿಕೊಟ್ಟಿದ್ದೀರಿ. ಮಾನ್ಯ ಸಚಿವರನ್ನು ಕೇಳುವುದೇನೆಂದರೆ, ಈಗಾದರೂ ಅವರು ವರದಿ ಏನು ಕೊಟ್ಟಿದ್ದಾರೆ ತಿಳಿಸಿ ಎಂದು 5 ಜನರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದರು. 5 ಜನರ ಲೈಸನ್ಸ್ ರದ್ದಾಗಿದೆ ಎಂದೂ ಹೇಳಿದರು. 5 ಜನ ಲೈಸನ್ಸ್ ರದ್ದಾಗಿರುವುದನ್ನು ಸ್ಟೇ ಮಾಡಿದ್ದಾರೆ. ಡೆಪ್ಯುಟಿ ಕಮಿಷನರ್ ಮಾಡಿದಂಥ ರದ್ದಿಯಾತಿ ಅನ್ಯಾಯ ಎಂದು ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಮತ್ತೆ ಸ್ಟೇ ಮಾಡಿದ್ದಾರೆ. ಫುಡ್ ಇನ್‌ಸ್ಪೆಕ್ಟರ್ ವರದಿ ಕಳಿಸುತ್ತಾರೆ, ಡೆಪ್ಯುಟಿ ಕಮಿಷನರ್ ಲೈಸನ್ಸ್ ಸಸ್ಪೆಂಡ್ ಮಾಡುತ್ತಾರೆ; ನಂತರ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟ್ ಡೈರೆಕ್ಟರ್‌ರವರು ರಹದಾರಿ ಪುನಹ ಕೊಡುತ್ತಾರೆ, ಸಸ್ಪೆಂಡ್ ಮಾಡಿರುವುದು ತಪ್ಪು ಎಂದು. ನನಗೆ ಯಾರ್ಯಾರ ಕೈವಾಡ ಹೀಗೆ ಎಲ್ಲೆಲ್ಲಿ ಇದೆ ಎಂದು ಗೊತ್ತಿಲ್ಲ. ಇವತ್ತಿನದಿವಸ ಹಣದ ವ್ಯವಹಾರದಲ್ಲಿ ಲಂಚಾವತಾರ ಯಾವರೀತಿ ಇದೆಯೋ ನನಗೆ ಗೊತ್ತಿಲ್ಲ. ಅದನ್ನು ಕಂಡುಹಿಡಿಯುವ ಪ್ರಮೇಯ, ಜವಾಬ್ದಾರಿ ಮಂತ್ರಿಗಳದ್ದಾಗಿದೆ. ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಯಾವ ಕಾರಣದಿಂದ ಸ್ಟೇ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಅದಕ್ಕೆ ಮಂತ್ರಿಗಳು ಉತ್ತರ ಕೊಡಬೇಕು. ಅವರು ಬೇರೆ ಸ್ವಂತ ಕಾರಣಗಳಿಂದ ಅಥವಾ ಯಾರಿಗೋ ಅನುಕೂಲವಾಗುವ ಕಾರಣದಿಂದ ಸ್ಟೇ ಮಾಡಿದ್ದರೆ ಅದು ತಪ್ಪು, ನ್ಯಾಯವಲ್ಲ ಅಂಥವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಮೊದಲು ನಮಗೆ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡೈರೆಕ್ಟರ್ ಮಾಡಿರುವಂಥ ಕೆಲಸದ ಬಗ್ಗೆ ಸರಿಯಾದಂಥ, ಸ್ಪಷ್ಟವಾದಂಥ ವಿವರಣೆ ಕೊಡಬೇ

ಕಾಗಿದೆ. ನಂತರ ಇನ್ನೊಂದು ಮೂಲಭೂತ ಸಮಸ್ಯೆ ಬಂತು. ಆ 5 ಜನ ಯಾರು ಎಂದು ಕೇಳಿದ್ದಕ್ಕೆ ಹೆಸರೂ ಇಲ್ಲ ಎಂದು ಹೇಳಿದರು. ಮತ್ತೆ ಪುನಃ ತಿಳಿಸುತ್ತೇನೆ ಎಂದು ಹೇಳಿದರು. ಈಗ ಯಾದರೂ ಆ 5 ಜನ ಯಾರು ಎಂದು ತಿಳಿಯಬೇಕಾಗಿದೆ. ಅದರ ಬಗ್ಗೆ ವಿವರಣೆ ಕೊಡಬೇಕಾಗಿದೆ. ಅವರು ಹೇಳಿದಂಥ ಉತ್ತರ ನೋಡಿದರೆ 5 ಜನ ಹೆಸರು ಹೇಳಲಲ್ಲ.

ಫುಡ್ ಇನ್ಸ್‌ಪೆಕ್ಟರ್‌ರವರ ರಿಪೋರ್ಟ್‌ನಲ್ಲಿ ಏನೂ ಹೇಳಿಲ್ಲ. ಏತಕ್ಕೋಸ್ಕರ ಸ್ಟೇ ಮಾಡಿದ್ದೀರಿ ? ಆ ರಿಪೋರ್ಟ್‌ನಲ್ಲಿ ಕಾನ್‌ಫಿನ್ಡಿಯರ್ ಎಂದು ಹೇಳಿದ್ದೀರಿ. ಇದನ್ನು ನೋಡಿದರೆ ನನಗೆ ಏನು ಭಾಸವಾಗುತ್ತದೆಂದರೆ, ಯಾವುದೋ ಕಾರಣಕ್ಕಾಗಿ ಅವರಿಗೆ ರಕ್ಷಣೆ ಕೊಡುವುದಕ್ಕೋಸ್ಕರವಾಗಿ ಸರ್ಕಾರದವರು ಈ ರೀತಿ ಮಾರೆಮಾಚುತ್ತಿದ್ದಾರೆ ಎಂಬ ಶಂಕೆ ಇದೆ. ಆ ಶಂಕೆಯನ್ನು ದೂರ ಮಾಡಬೇಕಾದರೆ ಸ್ಪಷ್ಟವಾದ ಹೇಳಿಕೆಯನ್ನು ಈ ಮನೆಯ ಮುಂದೆ ಹೇಳಬೇಕಾಗಿದೆ. ಆ 5 ಜನರ ಮೇಲೆ ಏನು ರಿಪೋರ್ಟ್ ಇದೆ, ಅವರ ಮೇಲೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ಮೂಲಭೂತವಾದ ಸಮಸ್ಯೆ ಏನೇನೆಂದರೆ ಈ ಇಲಾಖೆಯಲ್ಲಿಯೇ ಆಗಲೀ, ಯಾವುದೇ ಇಲಾಖೆಯಲ್ಲಿಯಾಗಲೀ ಎಲ್ಲಾ ಇಲಾಖೆಗಳಿಗಿಂತ ಈ ಇಲಾಖೆ ಬಹಳ ಮುಖ್ಯವಾದ ಇಲಾಖೆ. ಆಹಾರಧಾನ್ಯ, ಪಹಿವಾಟು ಮಾಡುವ ಇಲಾಖೆ. ಈ ಇಲಾಖೆಗೆ ಜನ ಸಂಪರ್ಕವಿದೆ, ವ್ಯಾಪಾರಸ್ಥರ ಸಂಪರ್ಕವಿದೆ. ಇವತ್ತು ವ್ಯಾಪಾರಸ್ಥರ ಮೇಲೆ ದೂರುಗಳಿವೆ. ಬ್ಲಾಕ್ ಮಾರ್ಕೆಟ್, ಕಳ್ಳವ್ಯಾಪಾರ ಮಾಡುತ್ತಿದ್ದಾರೆ, ರೇಷನ್ ಕಾರ್ಡ್ ಸರಿಯಾಗಿ ಕೊಡುವುದಿಲ್ಲ. ಜಾಸ್ತಿ ಬೆಲೆಗೆ ಕೊಡುತ್ತಾರೆ ಎನ್ನುವ ದೂರುಗಳು ಬೇಕಾದಷ್ಟು ಇವೆ. ಆ ದೂರುಗಳನ್ನು ನಿವಾರಣೆ ಮಾಡಬೇಕು ಎಂದರೆ ಅವರು ದಿಟ್ಟತನದಿಂದ, ಸಾಹಸದಿಂದ ಹಿಡಿಯಬೇಕು. ಅದನ್ನು ನಿವರ್ಹಣೆ ಮಾಡಬೇಕು, ನಿರ್ವಹಣೆ ಮಾಡಬೇಕಾದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು ಅಂಥವರ ವಿಷಯದಲ್ಲಿ ಏನು ಧೋರಣೆ ಇದೆ ಎಂಬುದನ್ನು ಸಹ ಸ್ಪಷ್ಟವಾಗಿ ಹೇಳಬೇಕು.

ಮತ್ತೊಂದು ಗುರುತರವಾದ ಅಪಾದನೆಯನ್ನು ಮಾಡಬೇಕಾಗಿದೆ. ಇವತ್ತು ಬ್ಲಾಕ್ ಮಾರ್ಕೆಟ್‌ಗೆ ಬೆಂಬಲ ಕೊಡುತ್ತಿದ್ದೀರಿ, ಕಳ್ಳ ಮಾರ್ಕೆಟ್ಟಿಗೆ ಅನುಕೂಲ ಮಾಡಿಕೊಡುತ್ತಿದ್ದೀರಿ. ಯಾರು ಯಾರಿಗೆ ಸಹಾಯ ನೀಡಬೇಕೋ ಅವರಿಗೆ ಸಹಾಯ ಸೌಕರ್ಯವನ್ನು ನೀಡುತ್ತಿದ್ದೀರಿ ಅದರ ಬಗ್ಗೆ ವಿವರಣೆಯನ್ನು ನೀಡಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್ (ಆಹಾರ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಮಾನ್ಯ ಕೃಷ್ಣನ್‌ರವರು ಅರ್ಧ ತಾಸಿನ ಸಂದರ್ಭವನ್ನು ಉಪಯೋಗ ಮಾಡಿಕೊಂಡು ತಮ್ಮ ವಾಕ್‌ಚಾತುರ್ಯದಿಂದ ಕೇಸಿನ ಮಹತ್ವವನ್ನು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ನಿಜವಾಗಿ 5 ಜನರ ಹೆಸರನ್ನು ಉತ್ತರದಲ್ಲಿ ಹೇಳಬೇಕಾಗಿತ್ತು. ಆದರೆ ಆ ಹೆಸರುಗಳು ಅವತ್ತು ಇರಲಿಲ್ಲ. ಇಲ್ಲದ ಹೆಸರುಗಳನ್ನು ಹೇಳುವ ಪ್ರಯತ್ನ ಮಾಡುವ ಗೋಜಿಗೆ ನಾನು ಹೋಗಲಿಲ್ಲ ಆ 5 ಜನರ ಹೆಸರುಗಳನ್ನು ಹೇಳಿದ್ದರೆ ಮಾನ್ಯ ಕೃಷ್ಣನ್‌ರವರು ಅರ್ಧ ತಾಸಿನ ವಿವರಣೆಯನ್ನು ಕೇಳುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಕೇಳಿದಮೇಲೆ ಅಷ್ಟಕ್ಕೆ ಬಿಡಲಿಲ್ಲ ಏನೋ ಪಾಪಿಷ್ಠಾರೆ, ಏನೋ ಉದ್ದೇಶವಿದೆ ಎನ್ನುವ ಅರ್ಥ ಬರುವಂತೆ ತಮ್ಮ ವಾಕ್‌ಚಾತುರ್ಯದಿಂದ ಮೊತದಾಡಿದ್ದಾರೆ. ನಾನು ನಿಜವಾಗಿ ಸ್ಥಿತಿಯನ್ನು ಅರುಹಿದರೆ ನಿಜವಾಗಿ ಸರ್ಕಾರ ಅಥವಾ ಅಧಿಕಾರಿಗಳ ಇತಿಹಾಸದಲ್ಲಿಯೇ ಈಗ ಕೈಗೊಂಡ ಕ್ರಮ ಸತ್ಯವಾದದ್ದು ಮತ್ತು ಕ್ರಮ ಬದ್ಧವಾದದ್ದು ಎಂದು ಅವರು ಒಪ್ಪುತ್ತಾರೆ. ಆ 5 ಜನರ ಹೆಸರುಗಳು ಈ ರೀತಿ ಇದೆ.—

(1) ಶ್ರೀ ಎ. ಮೊಹಮದ್, ಕಾಪು ವಿಲೇಜ್ ಬಂಟವಾಳ್ ತಾಲ್ಲೂಕ್. ಸಾತ್ ಕೆನರಾ.

(2) ಶ್ರೀ ಬಾಲಕೃಷ್ಣ ಸೆಟ್ಟಿ, ಬೆಳಗೋಳಿ ತಾಲ್ಲೂಕ್, ಬಂಟವಾಳ.

(3) ಶ್ರೀ ಟಿ. ವೆಂಕಟೇಶ ಪೈ.

(4) ಶ್ರೀ ಮೊಹಿನುದ್ದೀನ್ ಕುನ್ನಿ.

(5) ಕೊಟ್ಟಕರ್ ಕೋ-ಆಪರೇಟಿವ್ ಸೊಸೈಟಿ, ಕೊಟವಾರ ವಿಲೇಜ್, ಮಂಗಳೂರು ತಾಲ್ಲೂಕ್.

ಈ 5 ಜನರೂ ಮಂಗಳೂರಿನವರು ಅಲ್ಲದೆ, ಬೆಲ್ಟ್ ಏರಿಯಾದಲ್ಲಿರತಕ್ಕವರು. ಪುಡ್ಕೈಪಡಿಂದ ಬೆರ್ಟ್ ಏರಿಯಾದಲ್ಲಿರುವುದರಿಂದ ಅವರ ಮೇಲೆ ಹೆಚ್ಚು ಹೆಚ್ಚು ಫಿರ್ಯಾದಿಗಳಿರಬಹುದು ಮತ್ತು ಇಂಪ್ಯಾಪರ್ ಡೀಲಿಂಗ್ಸ್ ಬಗ್ಗೆ ಮೇಲಿಂದ ಮೇಲೆ ಕೇಸನ್ನು ಹಾಕುವುದು ಕೆಲವು ಸಂದರ್ಭದಲ್ಲಿ ಅನಿವಾರ್ಯ

(ಶ್ರೀ ಕೆ. ಎಚ್. ಪಾಟೀಲ್)

ವಾಗುತ್ತದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಿಯಂತ್ರಣಕ್ಕೆ ಅನುಸಾರವಾಗಿ ಬೆರ್ಟ್ ಏರಿಯಾದಲ್ಲಿರುವ ಜನರನ್ನು ಸಾಸೊತ್ರವಾಗಿ ಬಿಡುವುದರಿಂದ ಅವರು ಬೇರೆ ಕಡೆ ಮಾಲುಗಳನ್ನು ಸಾಗಿಸುತ್ತಾರೆ ಎನ್ನುವ ದೃಷ್ಟಿಯಿಂದ, ತಮ್ಮ ಮೇಲೆ ಇರುವ ವಾಯಿದೆಯು ಇಟ್ಟು ಕೊಳ್ಳುವುದಕ್ಕೆ ಬರಲಾರದಂಥ ವ್ಯವಸ್ಥೆಯು ಕಾನೂನಿನಲ್ಲಿ ಬಹಳ ದಿವಸಗಳಿಂದ ನಡೆದು ಬಂದಿದೆ. ಈ ಕೇಸ್‌ಗಳನ್ನು ಸಹ ನಾನು ಫುಡ್ ಮಿನಿಸ್ಟರ್ ಆಗುವುದಕ್ಕಿಂತ ಪೂರ್ವದಲ್ಲಿ ಅಂದರೆ 1979ನೇ ಇಸವಿಯಲ್ಲಿ ಡೆಪ್ಯುಟಿ ಕಮೀಷನರ್‌ರವರು ತೆಗೆದುಕೊಂಡಂಥ ನಿರ್ಣಯಗಳು ಇವೆ. ಆ ನಿರ್ಣಯದಲ್ಲಿ ಏನು ಮಾಡಿದ್ದಾರೆ ಎಂದರೆ ಮೊದಲನೆಯವರಾಗಿ ಎ. ಮೊಹಮದ್ ಕಾಪುರವರು ಸೇಲ್ಸ್ ಟ್ಯಾಕ್ಸನ್ನು ಹೆಚ್ಚು ಮಾಡಿ ಜನರಿಂದ ಹೆಚ್ಚು ರೊಕ್ಕವನ್ನು ಕಲೆಕ್ಟ್ ಮಾಡಿದ್ದರು ಎನ್ನುವ ಚಾರ್ಜ್ ಇಟ್ಟಿದ್ದಾರೆ, ಎರಡನೆಯವರ ಮೇಲೆ ಏನು ಚಾರ್ಜ್ ಇಟ್ಟಿದ್ದಾರೆ ಎಂದರೆ ಅವರು ರೇಷನ್ ಕಮಾಡಿಟೀಸ್‌ನ್ನು ಓವರ್ ಚಾರ್ಜ್ ಮಾಡಿ ಜನರಿಂದ ಹೆಚ್ಚು ರೊಕ್ಕವನ್ನು ವಸೂಲಿ ಮಾಡಿದ್ದಾರೆ ಎನ್ನುವ ಚಾರ್ಜನ್ನು ಇಟ್ಟಿದ್ದಾರೆ. ಮೂರನೆಯವರೂ ಸಹ ಸೇಲ್ಸ್ ಟ್ಯಾಕ್ಸ್‌ನ್ನು ಹೆಚ್ಚು ಮಾಡಿದ್ದರು ಎನ್ನುವ ಚಾರ್ಜ್ ಹಾಕಿದ್ದಾರೆ. 4ನೆಯವರಮೇಲೆ ಐಡೆಂಟಿಟಿ ಕಾರ್ಡ್ ಹೋಲ್ಡರ್ಸ್‌ನ್ನು ಸರಿಯಾಗಿ ಗಮನಕ್ಕೆ ತೆಗೆದು ಕೊಳ್ಳದೇ ಕಾರ್ಡ್ ಇಲ್ಲದೇ ಇರುವವರಿಗೂ ಸಹ ಆಹಾರ ಧಾನ್ಯವನ್ನು ಕೊಟ್ಟಿದ್ದಾರೆ. 5ನೆಯದು, ಕೋ-ಆಪರೇಟಿವ್ ಸೊಸೈಟಿ ಮೇಲೆ ಸ್ಟಾಕ್ ವೆರಿಫಿಕೇಷನ್ ಮಾಡಿದಾಗ ಎಕ್ಸಸ್ ಸ್ಟಾಕ್ ಇತ್ತು ಅದಕ್ಕಾಗಿ ಲೈಸನ್ಸ್ ರದ್ದು ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ. ಇದರ ಮೇಲೆ ಅವರು ಅಪೀಲು ಮಾಡಿದ್ದಾರೆ ಕಾನೂನುಬದ್ಧವಾಗಿದ್ದರೂ ಡೆಪ್ಯುಟಿ ಕಮೀಷನರ್‌ರವರ ಮೇಲೆ ಅಪೀಲು ಮಾಡಿದ್ದಾರೆ, ಅದು ಡೈರೆಕ್ಟರ್‌ರವರ ಕಡೆಗೆ ಇದೆ. ಡೈರೆಕ್ಟರ್‌ರವರು ಕೆಲವು ಬಿಲ್ಲುಗಳು, ಕಾಗದ ಪತ್ರಗಳು ಕ್ರಮಬದ್ಧವಾಗಿ ಕಾಣದೇ ಇರುವುದರಿಂದ ಅವುಗಳನ್ನು ವಾಪಸ್ಸು ಕಳುಹಿಸಿದ್ದಾರೆ. ಫರ್‌ದರ್ ಎನ್‌ಕ್ವೈರಿ ಮಾಡಿ ಯೋಗ್ಯವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಿ ಎಂದು ಅವರಿಗೆ ಬರೆದಿದ್ದೇವೆ. ಆರ್ಡರ್ ಸಮರ್ಪಕವಾಗಿಲ್ಲವೆಂದು ಅನ್ನಿಸಿದ್ದರಿಂದ ಸ್ಟೇ ಆರ್ಡರ್ ಕೊಟ್ಟು ನಂತರ ಸ್ಟೇ ಆರ್ಡರನ್ನು ವೆಕೇಟ್ ಮಾಡಿ ಕೇಸುಗಳನ್ನು ರಿಮ್ಯಾಂಡ್ ಮಾಡಿದ್ದಾರೆ. ಒಂದು ಕೇಸ್ ಮಾತ್ರ ಅಂದರೆ ಎ. ಮೊಹಮದ್ ಕಾಪು ರವರ ಕೇಸ್ ಅವರಲ್ಲಿ ಇದೆ, ಫರ್‌ದರ್ ರಿಕಾರ್ಡ್ ಕೇಳಿದ್ದಾರೆ. ರಿಕಾರ್ಡ್ಸ್ ಬಾರದೇ ಇರುವುದರಿಂದ ಅಪೀಲು ಅವರಲ್ಲಿ ವೆಂಡಿಂಗ್ ಇದೆ. ಮಾನ್ಯ ಸದಸ್ಯರು ಗಮನಿಸಬೇಕು. ಕ್ವಾಶಿ ಜ್ಯುಡಿಶಿಯರ್ ಪ್ರಕರಣದಲ್ಲಿರುವುದರಿಂದ ಸರ್ಕಾರದವರು ಪ್ರವೇಶ ಮಾಡಲಿಕ್ಕೆ ಬರುವುದಿಲ್ಲ, ಹಾಗೆ ಪ್ರವೇಶ ಮಾಡುವುದಾದರೆ ಹಾಗೆ ಹೋಗುವವರು ಅಧಿಕಾರದಲ್ಲಿರುವುದಕ್ಕೆ ಲಾಯಕ್ಕು ಇಲ್ಲ. ಎನ್ನುವ ಮಾತನ್ನು ಒಪ್ಪುವುದಾದರೆ ನಿಜವಾಗಿಯೂ ನಮ್ಮ ಸರ್ಕಾರ ಆ ರೀತಿ ಮಾಡುವುದಕ್ಕೆ ಸಿದ್ಧವಿಲ್ಲ. ಫುಡ್ ಡಿಪಾರ್ಟ್‌ಮೆಂಟನವರಿಗೆ ಬೆಂಬಲ ಕೊಡಬೇಕು ಎಂದು ಇದ್ದರೆ ಡೈರೆಕ್ಟರ್‌ರವರಿಗೆ ಹೇಳಿ ಅಪೀಲನ್ನು ಅರೋ ಮಾಡಿಸಬಹುದಾಗಿತ್ತು. ಆದರೆ ಮಾಡಲಿಲ್ಲ. ವಿರೋಧ ಪಕ್ಷದವರು ಎಂದು ಹಾಗೆ ಪಾದ ಮಾಡುವುದಾದರೆ ಸ್ಟೇ ಕೊಟ್ಟು ರಕ್ಷಣೆ ಕೊಟ್ಟುವ ಅವಶ್ಯಕತೆ ಇಲ್ಲ. ಅಪೀಲನ್ನು ತಿರುಗಿ ರಿಮೆಂಡ್ ಮಾಡಿ, ತಿರುಗಿ ಜಾಕಾಸಿ ಮಾಡಿ ಕೇಳುವುದರಿಂದ ತಮ್ಮ ನಂಶಯಕ್ಕೆ ಎಡೆಯಿಲ್ಲ. ಮಾನ್ಯ ಕಕ್ಕರಾಯರವರು ಕೊಟ್ಟ ಮಾಹಿತಿಯ ಆಧಾರದ ಮೇಲೆ ಕೇಳಿದ ಪ್ರಶ್ನೆಗೆ ಈ ಉತ್ತರದಿಂದ ಸಮಾಧಾನವಾಗುತ್ತದೆಂದು ಭಾವಿಸುತ್ತೇನೆ. ಈ 5 ಕೇಸ್‌ಗಳಾಗಲೀ, ಬರತಕ್ಕ ಕೇಸ್‌ಗಳಲ್ಲಿ ಆಗಲೀ ಅನೇಕ ವಿಷಯಗಳಲ್ಲಿ ನಿಜವಾಗಿ ನ್ಯಾಯದಾನವನ್ನು ಫುಡ್ ಕಮಿಟಿ ಕೊಡಬೇಕು ಎನ್ನುವುದು ನನ್ನ ಉದ್ದೇಶವಿದೆ. ಈ ಡಿಪಾರ್ಟ್‌ಮೆಂಟ್ ಬಹಳ ಮಹತ್ವದ್ದು ಇದೆ. ಜನರಿಗೆ ಆಹಾರ ಧಾನ್ಯ ಒದಗಿಸುವಾಗ ಆಹಾರ ಧಾನ್ಯ ವಿತರಣೆ ಮಾಡುವಾಗ, ಇನ್ನು ಯಾವುದೇ ರೀತಿಯಲ್ಲಿಯಾಗಲೀ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಕಾರ್ಯವನ್ನು ಮಾಡುತ್ತಾರೆ, ಆ ರೀತಿ ನಮ್ಮ ಅಧಿಕಾರಿಗಳು ವರ್ತನೆ ಮಾಡುತ್ತಾರೆ ಎನ್ನುವ ವಿಶ್ವಾಸವಿದೆ. ಅಂಥ ವಿಶ್ವಾಸವನ್ನು ಕಳೆದು ಕೊಂಡರೆ ಆ ಅಧಿಕಾರಿಗಳು ಇರುವುದಿಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಮಾನ್ಯ ಸದಸ್ಯರಿಗೆ ಈ ಪ್ರಶ್ನೆಯಿಂದ ಸಮಾಧಾನವಾಯಿತೆಂದು ಭಾವನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—5 ಜನರಲ್ಲಿ ಒಬ್ಬರದು ಇನ್ನು ಪೆಂಡಿಂಗ್ ಇದೆ ಎಂದು ಹೇಳಿದಿರಿ ಮತ್ತೆ 3 ಜನರ ಮೇಲೆ ಮಾಡಿದಂಥ ಆರೋಪಣೆಗಳು ಏನು ಇವೆ, ಯಾವುದೇ ಒತ್ತಾಯಕ್ಕೆ ಮಣಿಯದೇ, ಅಂಥವರ ಮೇಲೆ ಆರೋಪಣೆಗಳು ಇರುವಾಗ ಅವರಿಗೆ ಪುನಃ ಲೈಸೆನ್ಸ್ ಕೊಡ ಬಾರದು ಎನ್ನುವ ನಿರ್ಧಾರವನ್ನು ಸ್ಪಷ್ಟವಾಗಿ ಇಟ್ಟುಕೊಳ್ಳಬೇಕು. ಕೇಸ್ ಏತಕೋಸ್ಕರ ಮುಂದುವರಿಯುತ್ತಿದೆ ? ಸೈಮಲ್‌ಜೇನಿಯಸ್ ಆಗಿ ನಡೆದಿದೆ. ಅದು ಒಂದನ್ನು ಮಾತ್ರ ಏತಕ್ಕೆ ಮುಂದುವರಿಸುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ್.—ಡೈರೆಕ್ಟರ್‌ರವರಿಗೆ ಅಪಿಲೇಟ್ ಅಥಾರಿಟಿ ಇರುವುದರಿಂದ ಪೆಂಡಿಂಗ್ ಇದೆ. ಮಾಹಿತಿ ಕೇಳಿದ್ದಾರೆ, ಮಾಹಿತಿ ಪೊರೈಸಿಲ್ಲ. ಪೂರೈಸದೇ ಇರುವುದರಿಂದ ಒಂದು ವಾರ ಅಥವಾ 10 ದಿವಸದೊಳಗಾಗಿ ನಿಕಾಲ ಮಾಡಬೇಕೆಂದು ತಿಳಿಸುತ್ತೇನೆ.

Mr. DEPUTY SPEAKER .—It seems the Hon. member Phabhakar wanted speak on this. Under Rule 49, I cannot permit him. There is no scope at all. According to Rule 49. There shall be no formal motion before the Assembly nor voting. The member who has given notice shall make a short statement and the Minister concerned shall reply briefly. I am helpless under this Rule.

As scheduled, tommorrow non officiel business will be transacted.

The House will stand adjourned now to meet again tomorrow at 9 a.m.

The House adjourned at Fifty Five Minutes past Six of the Clock to meet again at Nine of the Clock on Saturday the 27th April 1974.